ವ್ಯಾಪಾರ ನಿಲ್ಲಿಸಿದ್ದಾರೆ. ಮಡಗಾಂವ್ ನಗರದ ಸಮೀಪ ಮಾಜೋರ್ಡೆ ಎಂಬ ಹಳ್ಳಿಯಲ್ಲಿ ಅವರ ಮನೆಯಿದೆ. ಈಗಲೂ ಅವರು ಅದೇ ಮನೆಯಲ್ಲಿದ್ದಾರೆ.

1944ರಲ್ಲಿ ದಾಮೋದರರು ಗೋವೆಯ ಗೌಡಸಾರಸ್ವತ ಅವಿಭಕ್ತ ಕುಟುಂಬದಲ್ಲಿ ಹುಟ್ಟಿದರು. ಅವರ ತಾಯಿ ಅನಕ್ಷರಸ್ಥೆ. ಅವರು ಕತೆಗಳ ಭಂಡಾರದಂತಿದ್ದರು. ದಾಮೋದರರನ್ನು ರಮಿಸಲು ಬಗೆಬಗೆಯ ಕತೆಗಳನ್ನು ಹೇಳುತ್ತಿದ್ದರು. ಅವು ಹೆಚ್ಚಾಗಿ ಜನಪದ ಮೂಲದಿಂದ ಬಂದವು. ತಾಯಿಗೆ ಕತೆ ಹೇಳುವ ಹವ್ಯಾಸವಿದ್ದಂತೆ, ಕತೆ ಕೇಳುವ ಕುತೂಹಲವೂ ಇರುತ್ತಿತ್ತು. ದಾಮೋದರರು ತಮ್ಮ ಮನೆಯಲ್ಲಿದ್ದ ಇಸೋಪನ ನೀತಿ ಕತೆಗಳು, ಅಕಬರ್–ಬೀರಬಲ್ಲರ ಕತೆಗಳು ಅರೇಬಿಯನ್ ನೈಟ್ಸ್ ಪುಸ್ತಕದ ಕತೆಗಳನ್ನು ತಾಯಿಯ ಮುಂದೆ ಓದುತ್ತಿದ್ದರು. ಇದರಿಂದ ಅವರಲ್ಲಿ ಕತೆ ಹೇಳುವ ಕಲೆ ಬೆಳೆಯಿತು.

ಇವರ ತಂದೆ ಹೆಚ್ಚು ಕಲಿತವರಲ್ಲ. ವ್ಯಾಪಾರದ ಗಡಿಬಿಡಿಯಲ್ಲಿ ಅವರಿಗೆ ಓದಲು ಸಮಯವೂ ಸಿಗುತ್ತಿರಲಿಲ್ಲ. ಆದರೆ, ಕತೆ ಪುಸ್ತಕಗಳನ್ನು ಖರೀದಿಸಿ ಮನೆಯಲ್ಲಿಡುತ್ತಿದ್ದರು. ಅದರಿಂದಾಗಿ ಮನೆ ತುಂಬ ಪುಸ್ತಕಗಳಿರುತ್ತಿದ್ದವು. ತಾಯಿಗೆ ಕತೆ ಓದಿ ಹೇಳುವ ನೆಪದಲ್ಲಿ ಕ್ರಮೇಣ ದಾಮೋದರರಲ್ಲಿ ಕತೆಗಳ ಕುರಿತ ಆಕರ್ಷಣೆ ಹೆಚ್ಚಾಯಿತು. ಒಮ್ಮೆ ಇವರು ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಇವರ ತಂದೆಯವರು ಹೊತ್ತು ಕಳೆಯಲು ‘ಬಾಲ ರಾಮಾಯಣ’ ಮತ್ತು ‘ಬಾಲ ಮಹಾಭಾರತ’ ಗ್ರಂಥಗಳನ್ನು ತಂದು ಕೊಟ್ಟು ಓದಲು ಹೇಳಿದರು. ಅವೆರಡನ್ನು ದಾಮೋದರರು ನೂರು ಬಾರಿಯಾದರೂ ಓದಿರಬೇಕು. ಹೀಗೆ ಬಾಲ್ಯದಲ್ಲಿ ಕತೆ ಹೇಳುವ, ಕತೆ ಕೇಳುವ ಅಭಿರುಚಿ ಮೊಳಕೆಯೊಡೆಯಿತು.

ಪ್ರಾಥಮಿಕ ಶಿಕ್ಷಣ ಮಾಜೋರ್ಡೆಯಲ್ಲಿ ಮುಗಿಸಿದ ದಾಮೋದರ ಹೈಸ್ಕೂಲು ಶಿಕ್ಷಣಕ್ಕೆ ಮಡಗಾಂವ್ ನಗರದ ‘ನ್ಯೂ ಎರಾ’ ಹೈಸ್ಕೂಲು ಸೇರಿದರು. ಅಲ್ಲಿ ಅವರು ಪುಸ್ತಕಗಳ ರಾಶಿ ನೋಡಿ

